ಒಂದಾಣೆ ಮಾಲೆ 296

ಅಣಿಲೆಕಾಯಿ

*

ರಚಯಿತ:

ಕವಿರಾಜ ಪಿ. ವಿ. ನಾಯಕ್,
ಆಯುರ್ವೇದ ಭಿಷಕ್, ಮಂಗಳೂರು.

*

1960

ಬೆಲೆ: ೧ ಆಣೆ.

ಒಂದಾಣೆ ಮಾಲೆ — ಮಂಗಳೂರು.

(9ನೇ ಪುಟದಿಂದ ಮುಂದುವರಿದುದು)

ಕಾಚನ್ನು ಸಮಪ್ರಮಾಣದಲ್ಲಿ ಎಲ್ಲಾ ಔಷಧಿಗಳನ್ನು ತೆಗೆದು ಚೂರ್ಣ ಮಾಡಿ ಲೋಳೆರಸದಲ್ಲಿ ಅರೆದು ಗಜ್ಜುಗಪ್ರಮಾಣದಲ್ಲಿ ಗುಳಿಗೆಯನ್ನು ಮಾಡಿ ಒಣಗಿಸಿಟ್ಟು ಬಿಸಿನೀರಿನಲ್ಲಿ, ಬೇವಿನ ಎಣ್ಣೆ, ಅಥವಾ ಬೆಣ್ಣೆ ಇತ್ಯಾದಿ ಗಳಲ್ಲಿ ಕಲಸಿ ಅರೆದು ಲೇಪಿಸಿದಲ್ಲಿ ಚರ್ಮರೋಗ, ನಂಜಿನ ವೃಣ ಹಳೇ ವೃಣಗಳು, ನಾರುಹುಣ್ಣು, ಗಾಯ, ವಿಷಜಂತುಗಳು ಕಚ್ಚಿದ ಗಾಯ, ಆಯುದಾದಿಗಳಿಂದಾದ ಗಾಯ ಇತ್ಯಾದಿಗಳು ಗುಣಹೊಂದುತ್ತವೆ.

ಅಣಿಲೆಮರದ ಚಕ್ಕೆ ಮತ್ತು ಅರಸಿನವನ್ನು ಚೂರ್ಣಮಾಡಿ ಬೇವಿನ ಎಲೆಯ ರಸದಲ್ಲಿ ಅರೆದು ಸಣ್ಣ ಬೊಗರಿಪ್ರಮಾಣದಲ್ಲಿ ಮಾತ್ರೆ ಮಾಡಿ ದಿನ ಒಂದರ 2 - 3ರನ್ನು ಜೇನಿನಲ್ಲಿ ಸೇವಿಸುತ್ತಾ ಬರಲು ಪಿತ್ತಕಾಮಾಲೆ, ಪಾಂಡುಗಳು ಗುಣವಾಗಿ ರಕ್ತದೋಷಹರವಾಗುವದು. ಇದೇ ಮಾತ್ರೆಯನ್ನು ನೀರಿನಲ್ಲಿ ಅರೆದು ಮೈಗೆ ಲೇಪಿಸಿದರೆ ಕಜ್ಜಿ ಗುಣವಾಗಿ ತುರಿಸುವಿಕೆಯು ಹೋಗಿ ಶರೀರಕ್ಕೆ ಕಾಂತಿಯು ಬರುವದು.

ಅಣಿಲೆಕಾಯಿಯ ಬೀಜವು ನೇತ್ರಗಳಿಗೆ ಹಿತಕಾರಿಯು, ಗುರುವಾದದ್ದು, ವಾತಪಿತ್ತಹಾರಿಯು.

ಅಣಿಲೆಯು ಅಧಿಕಪ್ರಮಾಣದಲ್ಲಿ ಸೇರಿರುವ ಅನೇಕ ಶಾಸ್ತ್ರೀಯವಾದ ಯೋಗಗಳಿಂದ ಕೂಡಿದ ಲೇಹ, ಚೂರ್ಣ, ಕಷಾಯ, ಆಸವ, ಅರಿಷ್ಟ, ಮಾತ್ರೆ, ಲೇಹಾದಿಗಳು ತುಂಬಾ ಇವೆ. ಅಣಿಲೆಯು ತ್ರಿಫಲಗಳಲ್ಲಿ ಒಂದು.

ಅಣಿಲೆಯು ಶಾಯಿ, ರಂಗು, ನಾರುಬಟ್ಟೆ, ಚರ್ಮದ ಹದಮಾಡುವಿಕೆ ಇತ್ಯಾದಿ ಕೈಗಾರಿಕೆಗಳಲ್ಲಿಯೂ ಉಪಯೋಗಿಸಲ್ಪಡುತ್ತಿದೆ.

ಅಣಿಲೆ ಕಾಯಿ

ಸಂಸ್ಕೃತ:—ಹರೀತಕೀ, ಹರಿತಕಿ.
ಹಿಂದಿ:—ಹರಡಾ, ಹರ್ರ, ಹರ್ಡ.
ಮರಾಠಿ:—ಹರ್ಡಕಿ, ಹರಡಾ.
ಕೊಂಕಣಿ:—ಹರಡೊ.
ಗುಜರಾಥಿ:—ಹರಡೆ, ಹೀಮುಜ
ತೆಲುಗು:—ಕರಕ್ಕ ಕಾಯಿ, ಕರಕ್ಕಾಯಿ.
ತಮಿಳು:—ಕಡುಕ್ಕಾಯ್.
ಮಲಯಾಳ:—ಕಡುಕ್ಕಾ, ಕಡುಕಾಯ್.
ತುಳು:—ಅಣಿಲೆದ ಕಾಯಿ.
ಸಿಂಧು:—ಹೇಮುಚಿ.
ಬಂಗಾಳಿ:—ಹೋರಾ, ಹರಿತಕೀ.
ಪಂಜಾಬಿ:—ಹರ, ಹರ್ರರ, ಹಲೇಲಾ, ಮರ.
ಉತ್ತ್ರ:—ಹರಿಡಾ.
ಮಲಯಾ:—ಬುಹ ಕಡುಕಾ (Buha Kaduka)
ಪಾರ್ಶಿ:—ಹಲಿಲೇ-ಜರ್ದ (Halila-he-Zarada)
ಅರಬಿ:—ಏಹಲೀಲಜ, ಹಲ್ಲಿಲೆ-ಇ-ಕಾಬುಲಿ; ಹಲ್ಲಿಲೆ-ಇ-ಜರ್ದ (ಅರಸಿನ) ಹಲ್ಲಿಲೆ-ಇ-ಶಿಯು (ಕಪ್ಪು).
ಉರ್ದು:—ಹಲಡಾ; ಹರಡ.
ಫ್ರೆಂಚ್:—Badmier Chebule.
ಜರ್ಮನಿ:—Rispiger Myrobla.
ಇಂಗ್ಲಿಷ್:—(ಚೆಬುಲ್ಲೀಕ್ ಮೈರೊಬುಲೆನ್) Chebulic Myerobulen; Ink nut; Indian gall nut.
ಲೇಟಿನ್:—Terminalia Chebula (ಟರಮಿನೆಲಿಯಾ ಚೆಬುಲಾ)
ಚೀನಾ:—Aralu (ಅರ್ಲು).

ಸಂಸ್ಕೃತದಲ್ಲಿ ಇದಕ್ಕೆ ಅನೇಕ ಪರ್ಯಾಯ ನಾಮಪದಗಳು ಇವೆ. ಅವುಗಳು ಅಣಿಲೆಯ ಹುಟ್ಟು, ಆಕಾರ, ಕ್ರಿಯಾಗುಣಾದಿಗಳನ್ನು ಸೂಚಿಸುವ ಸಂಕೇತನಾಮಗಳಾಗಿವೆ. ಉದಾ: ಹರೀತಕೀ, ಅಭಯಾ, ಪಥ್ಯಾ,

ವಯಸ್ಥಾ, ಸುಧಾ, ಭಿಷಕ್‌ಪ್ರಿಯಾ, ಭಿಷಕ್‌ವರಾ, ಶಿವಾ, ನಂದಿನೀ, ಪೂತನಾ, ಅಮೃತಾ, ಹೇಮವತೀ, ವಿಜಯಾ, ಕಾಯಸ್ಥಾ, ಜೀವತಿ, ಜೀವಪ್ರೀಯಾ, ಜೀವನೀಕಾ, ಚೇತಕಿ, ಚೇತನಕಿ, ಬಲ್ಯಾ, ರಸಾಯನ ಫಲಾ, ಪಾಚನಿ, ಪ್ರಮಥಾ, ರುದ್ರಪ್ರಿಯಾ, ಶಕ್ರವೃಷ್ಟಾ, ಸುಧೋದ್ಭವಾ, ಜಯಾ, ಜೀವ್ಯದೇವಿ, ದ್ವಿವಾ, ಗಿರಿಜಾ, ಶ್ರೀಯಸಿ, ಪ್ರಾಣದಾ ಇತ್ಯಾದಿ.

ಅಣಿಲೆಕಾಯಿ ಮರವು ಉತ್ತರ ಭಾರತದ ಕಾಡುಗಳಲ್ಲಿಯೂ, ಮಧ್ಯ ಪ್ರದೇಶ ಮತ್ತು ಬಂಗಾಳದಲ್ಲಿಯೂ ಸಾಮಾನ್ಯವಾಗಿ ಮದ್ರಾಸು, ಮೈಸೂರು ಮತ್ತು ಬೊಂಬಾಯಿ ಪ್ರಾಂತದ ದಕ್ಷಿಣ ಭಾಗದಲ್ಲಿಯೂ, ಮತ್ತು ಕಾಬೂಲ್‌ದೇಶದಲ್ಲಿಯೂ ಬೆಳೆಯುತ್ತಿದೆ. ಇದರ ಎಲೆ ಅಡುಸೋಗೆ ಎಲೆಯ ಆಕಾರದಲ್ಲಿದ್ದು, ಸ್ವಲ್ಪ ಕಿರಿದಾಗಿದೆ. ಇದರ ಹೂ ಸಣ್ಣದಾಗಿದೆ. ಇದರ ಕಾಯಿಯು ಸರ್ವಸಾಧಾರಣವಾಗಿ ಒಂದೂವರೆ ಇಂಚು ಉದ್ದವಾಗಿ ಅರಸಿನ ವರ್ಣಯುಕ್ತ ಉಳ್ಳದಾಗಿ ಸ್ವಲ್ಪ ದುಂಡಗಾಗಿ ಗೋಲಾಕಾರವಾಗಿರುತ್ತದೆ. ಅಣಿಲೆ ಹೂ ಮಾವಿನ ಹೂವಿನ ಆಕಾರದಲ್ಲಿ ಸ್ವಲ್ಪ ದೊಡ್ಡ ಪರಿಮಾಣ ಉಳ್ಳದಾಗಿದೆ. ಧನು-ಮಕರ ಮಾಸದಲ್ಲಿ ಹೂಬಿಟ್ಟು ಮಿಥುನ-ಕರ್ಕಾಟಕ ಮಾಸದಲ್ಲಿ ಅಣಿಲೆಯು ಪರಿಪಕ್ವವಾಗಿ ಬೆಳೆಯುತ್ತದೆ. ಈ ರೀತಿ ಅಣಿಲೆಯು ಬೆಳೆಯಲು 7 – 8 ತಿಂಗಳುಗಳ ಅವಧಿಯು ಬೇಕಾಗುತ್ತದೆ.

ಭೇದಗಳು: ಅಣಿಲೆಯಲ್ಲಿ ಆಯುರ್ವೇದ ನಿಘಂಟುಗಳಲ್ಲಿ ಹೇಳಿದ ಪ್ರಕಾರ ಸಪ್ತ ಭೇದಗಳಿವೆ. ವಿಜಯಾ, ರೋಹಿಣಿ, ಪೂತನಾ, ಅಮೃತಾ, ಅಭಯಾ, ಜೀವಂತ, ಚೇತಕಿ ಎಂಬವು. ಅಣಿಲೆಯಲ್ಲಿ ಅನೇಕ ಜಾತಿ ಅಣಿಲೆಯು ಇದೆ. ವ್ಯವಹಾರದಲ್ಲಿರುವ ಸರ್ವಸಾಧಾರಣವಾಗಿ ಅಣಿಲೆಯಲ್ಲಿರುವ ನಾಲ್ಕು ಜಾತಿಗಳು ಪೇಟೆಯಲ್ಲಿ ಸಿಕ್ಕುತ್ತವೆ. 'ಸುರ್ವರಿ ಹರಡಾ,' 'ರಂಗರಿಹರಡಾ,' 'ಬಾಲಹರಡಾ' ಮತ್ತು 'ಯುವಹರಡಾ' ಎಂಬುದಾಗಿ.

ಲಕ್ಷಣ: ವಿಜಯಾ ಎಂಬುದು ದುಂಡಗಾಗಿದ್ದು, ಎಲ್ಲಾ ಕಡೆಯಲ್ಲಿ ಸಿಕ್ಕುತ್ತದೆ. 'ರೋಹಿಣಿ'ಯು ಗೋಲಾಕಾರವಾಗಿದ್ದು, ಸಿಂಧೂನದಿಯ ದಡದಲ್ಲಿ ಬಹಳವಾಗಿ ದೊರೆಯುತ್ತದೆ. 'ಪೂತನಾ' ಇದಕ್ಕೆ ಸಣ್ಣ ಬೀಜವಿದ್ದು ಹೆಚ್ಚು ತಿರುಳು ಇರುವುದು; ಹಿಮಾಲಯದಲ್ಲಿ ಹೆಚ್ಚು ಬೆಳೆಯುತ್ತದೆ. ಅಮೃತಾ ಇದು ಬಹು ದಪ್ಪವಾಗಿರುವುದು. ಚಂಪಕಾರಣ್ಯದಲ್ಲಿ ಜಾಸ್ತಿ ಬೆಳೆಯುತ್ತದೆ. ಐದು ರೇಖೆಯುಳ್ಳ 'ಅಭಯಾ' ಸರ್ವತ್ರ ದೊರೆಯು

ತ್ತದೆ. 'ಜೀವಂತೀ' ಸ್ವರ್ಣದಂತೆ ಹಳದಿ ಬಣ್ಣದ್ದಿರುವುದು; ಸಣ್ಣ ಬೀಜ ಉಳ್ಳುದು. ಇದು ದಕ್ಷಿಣ ಭಾರತದಲ್ಲಿ ಪ್ರಬಲವಾಗಿದೆ. 'ಚೇತಕಿ'ಯು ಮೂರು ರೇಖೆಯುಳ್ಳದಾಗಿ ಉತ್ತರ ಹಿಂದೂಸ್ಥಾನದಲ್ಲಿ ಬೆಳೆಯುತ್ತದೆ. ಇದರಲ್ಲಿ ಎರಡು ಭೇದಗಳಿವೆ. ಬಿಳಿ ಮತ್ತು ಕಪ್ಪು. ಬಿಳಿಯು ಉದ್ದವಾಗಿದೆ, ಕಪ್ಪು ಸಣ್ಣದಾಗಿದೆ.

ನಾಲ್ಕು ಜಾತಿಯ ಅಣಿಲೆಯಲ್ಲಿ 'ಸುರ್ವರಿ'ಯು ದೊಡ್ಡದಾಗಿ ಘನವಾಗಿ, ಭಾರವಾಗಿದ್ದು ಸಾಧಾರಣ ಎರಡು ಇಂಚು ಉದ್ದವಾಗಿ ನಸುಕಂದು ಉಳ್ಳ ಹಳದಿ ವರ್ಣದ್ದಾಗಿರುತ್ತದೆ. ಇದನ್ನು ತುಂಡುಮಾಡಿದಲ್ಲಿ ಹಳದಿ ಅಥವಾ ಕಂದು ಉಳ್ಳ ತಿರುಳು ಮತ್ತು ಬೀಜವು ಕಾಣಿಸುವದು. 'ರಂಗರಿ' ಯು ಮೇಲಿನ 'ಸುರ್ವರಿ'ಗಿಂತ ಸಣ್ಣದು, ಕಡಿಮೆ ಗುಣ ಉಳ್ಳದಾಗಿ ಅದಕ್ಕಿಂತ ಕೆಳಗಿನ ತರಗತಿಯದ್ದಾಗಿದೆ. ಇದು ಉದ್ದದಲ್ಲಿ ಸಾಧಾರಣ ಒಂದು ಇಂಚು. ಇದರ ಸಿಪ್ಪೆಯು ಹಳದಿವರ್ಣವಾಗಿರುತ್ತದೆ. ಇದನ್ನು ತುಂಡು ಮಾಡಿದಲ್ಲಿ ಶುಷ್ಕ ಉಳ್ಳ ಹಳದಿವರ್ಣದ ತಿರುಳು ಮತ್ತು ಬೀಜವು ಕಾಣ ಸಿಕ್ಕುವುದು. ಇದು 'ಸುರ್ವರಿ'ಗಿಂತಲೂ ಕಡಿಮೆ ಚೊಗರು ಉಳ್ಳದ್ದು. 'ಬಾಲಹರಡೆ'ಯು ಮೇಲಿನ ಎರಡು ವಿಧದವುಗಳಿಗಿಂತ ಸಣ್ಣದಾಗಿ ಜಾಸ್ತಿ ಮಹತ್ವವಾದ ಗುಣ ಉಳ್ಳದಾಗಿರುತ್ತದೆ. ಇದರ ತಿರುಳು ದಪ್ಪವಿದ್ದು ಬೀಜವು ಇರುವುದಿಲ್ಲ. ನಾಲ್ಕನೆಯದಾದ 'ಯವಹರಡೆ'ಯು ಎಲ್ಲಾ ಅಣಿಲೆಗಿಂತಲೂ ಸಣ್ಣದಾಗಿದ್ದು, 'ಬಾಲಹರಡೆ'ಯ ಗುಣ ಉಳ್ಳದಾಗಿರುತ್ತದೆ.

ಅಣಿಲೆಯಲ್ಲಿರುವ ರಸಾದಿಗಳು:—ಅಣಿಲೆಯಲ್ಲಿ ಷಡ್ರಸಗಳ ಪೈಕಿ ಲವಣರಸ ಮಾತ್ರವಿರುವುದಿಲ್ಲ. ಉಳಿದ ಸಿಹಿ, ಹುಳಿ, ಕಹಿ, ಖಾರ ಮತ್ತು ಚೊಗರು—ಪಂಚರಸಗಳು ಇರುವವು. ಇದರ ಮಜ್ಜಾದಲ್ಲಿ ಮಧುರ ರಸವೂ, ಅದರ ನಾರುಗಳಲ್ಲಿ ಹುಳಿರಸವೂ, ಅದರ ವೃಂತದಲ್ಲಿ ತಿಕ್ತರಸವೂ, ಅದರ ಸಿಪ್ಪೆಯಲ್ಲಿ ಖಾರರಸವೂ, ಅದರ ಅಸ್ಥಿಯಲ್ಲಿ ಕಷಾಯರಸವೂ ಇರುವುದು. ಅಣಿಲೆಯಲ್ಲಿ ಪ್ರಾಮುಖ್ಯವಾಗಿ ಚೊಗರು ರಸವು ಇರುವುದರಿಂದ ಒಣಗಿಸುವ ಶಕ್ತಿಯುಳ್ಳದ್ದಾಗಿದೆ. ಇದರಲ್ಲಿ ಟೇನ್ನಿಕ್ (Tannic acid) ಎಂಬ ದ್ರಾವಕವು 45% ಮತ್ತು ಗೆಲ್ಲಿಕ್ ಎಸಿಡ್ (Gallic acid) ಎಂಬ ದ್ರಾವಕವೂ ಜಾಸ್ತಿ ಇವೆ. ನಸು ಕಂದುಯುಕ್ತ ಅರಸಿನ ವರ್ಣವನ್ನೀಯುವ ಶುಭ್ರವಾದ ಪದಾರ್ಥವು ಇದರಲ್ಲಿ ಇದೆ. 45% ಉಳ್ಳ ಚೆಬುಲಿ

ನೀಕ್ (Chebulinic acid) ಎಂಬ ದ್ರಾವಕವು ನೀರಿನಲ್ಲಿ ಬಿಸಿಯಾಗುವಾಗ ಟೇನ್ನಿಕ್ ಮತ್ತು ಗೆಲ್ಲಿಕ್ ಎಂಬ ದ್ರಾವಕಗಳು ಉಂಟಾಗುತ್ತವೆ. (ನಾಡಕರ್ಣಿಯವರ ಮೇಟರಿಯಾ ಮೇಡಿಕಾದಿಂದ.)

ಅಣಿಲೆಯು ಉಷ್ಣವೀರ್ಯವು, ಮಧುರ ವಿಪಾಕ ಉಳ್ಳದು. ಇದರಲ್ಲಿ ಹುಳಿ ರಸವಿರುವುದರಿಂದ ವಾತವನ್ನೂ, ಮಧುರ ಮತ್ತು ಕಹಿ ರಸವಿರುವುದರಿಂದ ಪಿತ್ತವನ್ನೂ, ಕಷಾಯ ಮತ್ತು ರೂಕ್ಷತೆಯ ಗುಣದಿಂದ ಕಫವನ್ನೂ ನಾಶಮಾಡುತ್ತದೆ. ಇದರಿಂದಾಗಿ ಇದು ತ್ರಿದೋಷಹರ ಗುಣವುಳ್ಳದ್ದಾಗಿರುತ್ತದೆ. ಇದು ಯೋಗವಾಹಿ ಗುಣವುಳ್ಳದ್ದು. (ಯಾವುದರ ಜೊತೆಯಲ್ಲಿ ಸೇರುವದೋ ಅದರಂತೆ ಕೆಲಸಮಾಡುವುದು)

ಅಣಿಲೆಯ ಬೀಜವನ್ನು ತೆಗೆದು ಅದರ ಚಟ್ಟು ಮಾತ್ರ ಹೆಚ್ಚಾಗಿ ಉಪಯೋಗಿಸುವರು. ಅದನ್ನು ಹಸಿಯಾಗಿಯೂ, ಪಕ್ವವಾದ ಮೇಲೂ, ಒಣಗಿದ ನಂತರವೂ ಉಪಯೋಗಿಸುತ್ತಾರೆ. ಅಣಿಲೆಯ ಮರದ ಹೂ, ಕೆತ್ತೆ, ಅಣಿಲೆ ಕಾಯಿಯ ಬೀಜ ಸಹ ಉಪಯೋಗಿಸುವುದು ಇದೆ. ಶ್ರೇಷ್ಠವಾದ ಅಣಿಲೆ ಕಾಯಿಯು ಸ್ನಿಗ್ಧ ಉಳ್ಳದಾಗಿ, ಘನವಾಗಿ, ಗೋಲಾಕಾರವಾಗಿ ಭಾರ ಇತ್ಯಾದಿ ಗುಣಗಳು ಉಳ್ಳದಾಗಿರುತ್ತದೆ. ನೀರಿನಲ್ಲಿ ಹಾಕಿದರೆ ಮುಳುಗಬೇಕು.

ಅಣಿಲೆಯು ಉಷ್ಣ ವೀರ್ಯ, ತ್ರಿದೋಷಹರವು, ಅಗ್ನಿದೀಪನವು, ಪಾಚಕವು, ಮೇಧಾಶಕ್ತಿಯುಳ್ಳದು; ವಿಪಾಕದಲ್ಲಿ ಮಧುರವು, ರಸಾಯನವು, ಲಘು, ವಾತವನ್ನು ಅನುಲೋಮನ ಮಾಡುವ ಶಕ್ತಿ ಉಳ್ಳದು. ಹೃದಯಕ್ಕೆ ಬಲವೀಯುವುದು; ವಿರೇಚಕವು; ಆಯುಷ್ಯ, ಬಲ, ಸ್ಮೃತಿ, ಶಕ್ತಿಗಳ ಬಲ ಮತ್ತು ವೃದ್ಧಿಪಡಿಸುವುದು. ನೇತ್ರಗಳಿಗೆ ಹಿತಕಾರಿಯು; ಈ ಎಲ್ಲಾ ಗುಣಗಳಿಂದ ಶುಭದಾಯಕವು. ಮಸ್ತಕ ರೋಗ, ಸ್ವರಭಂಗ, ವಿಷಮ ಜ್ವರ, ಪುರಾಣಜ್ವರ, ಪಾಂಡು, ಕಾಮಲಾ, ಶೋಷ, ಶೋಫ, ಶೋಥ, ಮೂತ್ರಾಘಾತ, ಸಂಗ್ರಹಿಣಿ, ಅತಿಸಾರ, ಮೂತ್ರಕೃಚ್ಛ, ವಮನ, ಪ್ರಮೇಹ, ಕೃಮಿ, ಶ್ವಾಸ, ಕಾಸ, ವಿಷ, ಉದರವ್ಯಾಧಿ, ಬೆವರು, ಮಲಸ್ತಂಭ, ಕರ್ಣರೋಗ, ಅನಾಹವೆಂಬ ವಾತವ್ಯಾಧಿ, ಪ್ಲೀಹ, ಗುಲ್ಮ, ಬಿಕ್ಕಳಿಕೆ, ಉರುಸ್ತಂಭ, ಶೂಲೆ, ಅರುಚಿ ಇತ್ಯಾದಿ ರೋಗಗಳನ್ನು ಅನುಪಾನ, ಕಾಲ, ಪರಿಮಾಣ, ನಿಯಮಾನುಗುಣಗಳ ವಿಶೇಷತ್ವದಿಂದ ಉಪಯೋಗಿಸಿದರೆ ಗುಣ

ಪಡಿಸುವುದು. ಯುನಾನಿ ವೈದ್ಯ ಗ್ರಂಥದಲ್ಲಿ ಸಹ ಇದರ ಗುಣವನ್ನು ಚೆನ್ನಾಗಿ ಬರೆದಿದ್ದಾರೆ. ಸ್ಮೃತಿ, ಶಕ್ತಿಯನ್ನು ಹೆಚ್ಚಿಸುವದು; ರಸಾಯನವು; ಮೂಲವ್ಯಾಧಿ, ಅತಿಸಾರ, ಪಕ್ಷವಾತ, ತಲೆಶೂಲೆ, ಅಪಸ್ಮಾರ, ಕುಷ್ಠಗಳನ್ನು ಗುಣಪಡಿಸುವುದು. ರಕ್ತಶುದ್ಧಿಯನ್ನುಂಟುಮಾಡುವುದಾಗಿ ತಿಳಿಸಿದ್ದಾರೆ.

ಅಣಿಲೆ ಕಾಯಿಯಲ್ಲಿ ಒಗರು ಗುಣವಿರುವುದರಿಂದ, ಬಾಯಿ ವ್ರಣಗಳಿಗೂ, ಅರುಚಿಗೂ, ಅತಿಮೂತ್ರ, ರಕ್ತಪೀನಸ, ಆಮಶಂಕೆ, ರಕ್ತಮೂಲವ್ಯಾಧಿ, ರಕ್ತಸ್ರಾವ, ಅತಿಸಾರ ಮೊದಲಾದವುಗಳಿಗೂ ಉಪಯೋಗಿಸಬಹುದೆಂದು ಪ್ರಸಿದ್ಧರಾದ ಇಂಗ್ಲಿಷ್ ಡಾಕ್ಟರರೂ ಅಭಿಪ್ರಾಯಪಟ್ಟಿರುವರು.

ಉಪಯೋಗ: ಸಪ್ತಭೇದಗಳಲ್ಲಿ ವಿಜಯಾ ಶ್ರೇಷ್ಠವಾದದ್ದು; ಇದು ಸ್ವರ ರೋಗಗಳಿಗೂ ಉಪಯೋಗವಾದುದು. ರೋಹಿಣಿಯು ವ್ರಣರೋಪಣ ಕಾರ್ಯಕ್ಕೆ ಉಪಯೋಗವು. ಲೇಪಮಾಡುವ ವಿಷಯದಲ್ಲಿ ಪೂತನಾ ಯೋಗ್ಯವಾದುದು. ವಿರೇಚನಕ್ಕೆ ಅಮೃತಾ ಹಿತವಾದುದು. ನೇತ್ರರೋಗಕ್ಕೆ ಅಭಯಾ ಉತ್ತಮವು. ಚೂರ್ಣಕ್ಕಾದರೆ ಚೇತಕೀಯನ್ನು ಹಾಕಬೇಕು. ಜೀವಂತಿಯು ಸರ್ವರೋಗಹರವಾದದ್ದು. ಈ ಎಲ್ಲಾ ವಿಧವಾದ ಅಣಿಲೆ ಕಾಯಿಗಳೂ ಬಾಧಕವಲ್ಲದ ಭೇದಿಕಾರಿಯಾದವು. ಅದರಲ್ಲಿಯೂ ಚೇತಕಿಯು ವಿಶೇಷ ಭೇದಿಕಾರಿಯು.

ರಂಗರಿ ಜಾತಿಯ ಅಣಿಲೆಯು ಉಭಯ ಗುಣವುಳ್ಳದಾಗಿ ಬಲವನ್ನೀಯುವ, ವಿರೇಚನ ಹಾಗೂ ರಸಾಯನವಾಗಿ ಕೆಲಸಮಾಡುತ್ತದೆ. ಹೆಚ್ಚಾಗಿ ಜ್ವರ, ಕೆಮ್ಮು, ಉಬ್ಬಸ, ಮೂತ್ರ ವ್ಯಾಧಿಗಳಿಗೆ, ಮೂಲವ್ಯಾಧಿ, ಕ್ರಿಮಿ, ವಾತ, ಚೇಳು ಕಚ್ಚಿದಕ್ಕೆ ಇತ್ಯಾದಿಗಳಿಗೆ ಉಪಯೋಗವು ಸುರ್ಗವರಿಯು ಉತ್ತಮ ವಿರೇಚನ ಗುಣವುಳ್ಳದು. ಬಾಲಅಣಿಲೆಯು ಸೌಮ್ಯವಾದ, ಸುಖಕರವಾದ ವಿರೇಚಕ ಹಾಗು ಪಿತ್ತಪ್ರಕೋಪವನ್ನು ಶಾಂತಮಾಡುವುದು. ಪಕ್ವವಾದ ಅಣಿಲೆಯು ವಿರೇಚನ ಗುಣವಿದ್ದು ಜಾಸ್ತಿ ಪಿತ್ತ, ಕಫವನ್ನು ಹೋಗಲಾಡಿಸಿ ಸಮವಾಗಿರಿಸುವುದು. ಬಾಲಹರಡೆಯನ್ನು ಹಳೇ ದೀರ್ಘಕಾಲದ ರಕ್ತಾತಿಸಾರ ಮತ್ತು ಪ್ರವಾಹಿಕೆಗಳಲ್ಲಿ, ವಾಯು, ವಾಂತಿ, ಕಪ್ಪೆಕೆಮ್ಮು, ಹೊಟ್ಟೆ ನೋವು ಮತ್ತು ಯಕೃತ, ಪ್ಲೀಹಗಳ ವೃದ್ಧಿಯಲ್ಲಿ ಉಪಯೋಗಿಸುತ್ತಾರೆ. ನೇತ್ರರೋಗಗಳಿಗೆ ಇದನ್ನು ಜೇನು ಅಥವಾ ನೀರಿನಲ್ಲಿ ಉಪಯೋಗಿಸಿದಲ್ಲಿ ಉತ್ತಮ ಫಲವು. ಯವ ಜಾತಿಯ ಅಣಿಲೆಯು ಇದೇ

ರೀತಿ ಉಪಯೋಗಕ್ಕೆ ಬೀಳುತ್ತದೆ. ಅಣಿಲೆಯನ್ನು ಕಫ ಸಂಬಂಧವಾದ ಬಾಯಿ ಹುಣ್ಣುಗಳಿಗೆ ಬಾಯಿ ಮುಕ್ಕಳಿಸಲು (ಗಂಡೂಷ) ಉತ್ತಮವು. ಬಾಯಿಯಲ್ಲಿ ವ್ರಣ, ಅಗ್ರ, ಮಸಡುಗಳಲ್ಲಾಗುವ ಹುಣ್ಣು ಇತ್ಯಾದಿಗಳಿಗೆ ದಿವ್ಯಔಷಧವು. ಬಾಲಹರಡೆಯು, ಪನ್ನೀರಿನಲ್ಲಿ ಅರೆದು ಲೇಪತಾಗಿಸಿದಲ್ಲಿ ಪಿತ್ತ ಸಂಬಂಧವಾದ ಬಾವು, ಉರಿ ಇತ್ಯಾದಿಗಳಿಗೆ ಉತ್ತಮವು.

ಸೇವನಾ ಪ್ರಮಾಣ:

ಪ್ರಮಾಣ: ಕಾಲು ತೊಲೆಯಿಂದ 1 ತೊಲೆಯ ತನಕದ ಚೂರ್ಣವನ್ನು ನೀರಿನಲ್ಲಿ ಚೆನ್ನಾಗಿ ಅರೆದು ವಸ್ತ್ರದಲ್ಲಿ ಗಾಳಿಸಿ ಜೇನಿನಲ್ಲಿ ಸುಖ ವಿರೇಚನಕ್ಕೆ ½ ತೊಲೆಯಿಂದ 2 ತೊಲೆಯ ವರೆಗೆ ಕಷಾಯಕ್ಕೆ (3 ಪಾಲು ನೀರು ಇಟ್ಟು 2 ಪಾಲು ಇರುವಾಗ ಇಳಿಸುವದು). ಬೇರೆ ಔಷಧಿಯೊಂದಿಗೆ ಕಷಾಯಕ್ಕೆ ಹಾಕುವಲ್ಲಿ ¼ ತೊಲೆಯಿಂದ 1 ತೊಲೆಯ ವರೆಗೆ ಹಾಕಬಹುದು.

ಇದನ್ನು ಸೇವಿಸುವ ಪ್ರಮಾಣವು 10 ಗ್ರೇನ್‌ನಿಂದ 30 ಗ್ರೇನ್‌ನ ವರೆಗೆ. ವ್ಯಾಧಿ, ವಯಸ್ಸು, ಶಕ್ತಿಗಳ ಅನುಸಾರ ದಿನ ಒಂದಕ್ಕೆ ಎರಡರಿಂದ ನಾಲ್ಕು ಸಾರಿ ಸೇವಿಸಬಹುದು. ಅಣಿಲೆಯನ್ನು ಅಜೀರ್ಣ ಉಳ್ಳ ರೋಗಿಯೂ, ರೂಕ್ಷನೂ, ಬಳಲಿರುವವನೂ, ಬಲಹೀನನೂ, ಕೃಶನೂ, ಲಂಘನದಿಂದ ದುರ್ಬಲನಾದವನೂ, ಅಧಿಕ ಪಿತ್ತರೋಗದ ಸ್ವಭಾವದವನೂ, ಗರ್ಭವತಿ ಸ್ತ್ರೀಯೂ, ನವೀನ ಜ್ವರಾತುರನೂ, ರಕ್ತಮೋಕ್ಷಣ ಮಾಡಲ್ಪಟ್ಟಿರುವವನೂ, ಹನುಸ್ತಂಭರೋಗಿಯೂ, ಶೋಷ ರೋಗಿಯೂ ಸಹ ಸೇವಿಸಬಾರದು.

ಅಣಿಲೆಯನ್ನು ಹಲ್ಲಿನಿಂದ ಜಗಿದು ನುಂಗುತ್ತಾ ಬರಲು, ದುರ್ಬಲವಾದ ಅಗ್ನಿಯು ವೃದ್ಧಿ ಹೊಂದುವದು. ಅರೆದು ಸೇವಿಸಿದಲ್ಲಿ ಮಲಶೋಧನೆಯನ್ನುಂಟುಮಾಡುವದು. ಇದನ್ನು ಬೇಯಿಸಿ ಸೇವಿಸಿದ್ದಲ್ಲಿ ಮಲವನ್ನು ತಡೆಯುತ್ತದೆ. ಇದನ್ನು ಹುರಿದು ಚೂರ್ಣಮಾಡಿ ಸೇವಿಸಿದಲ್ಲಿ ತ್ರಿದೋಷಹರವು. ಅಣಿಲೆಯನ್ನು ಲವಣದೊಂದಿಗೆ ಸೇವಿಸಿದರೆ ಕಫವನ್ನೂ, ಸಕ್ಕರೆಯೊಡನೆ ಸೇವಿಸಿದಲ್ಲಿ ಪಿತ್ತವನ್ನೂ, ತುಪ್ಪದೊಡನೆ ಸೇವಿಸಿದರೆ ವಾತದಿಂದ ಉಂಟಾದ ಉಪದ್ರವಗಳನ್ನೂ ಶಮನಿಸುವುದು. ಬೆಲ್ಲದೊಡನೆ ಸೇವಿಸಿದರೆ ತ್ರಿದೋಷಹರವು.

ಅಣಿಲೆಕಾಯಿಂದ ರಸಾಯನ ಗುಣವನ್ನು ಪಡೆಯಲಪೇಕ್ಷಿಸುವಲ್ಲಿ ಅದನ್ನು ವರ್ಷಋತುವಿನಲ್ಲಿ ಸೈಂಧವಲವಣದೊಂದಿಗೂ, ಶರದೃತುವಿನಲ್ಲಿ ಹಿಪ್ಲಿಯ ಚೂರ್ಣದೊಂದಿಗೂ, ವಸಂತಋತುವಿನಲ್ಲಿ ಜೇನಿನೊಂದಿಗೂ, ಗ್ರೀಷ್ಮಋತುವಿನಲ್ಲಿ ಬೆಲ್ಲದೊಂದಿಗೂ ನಿತ್ಯವೂ ಯುಕ್ತಪ್ರಮಾಣದಲ್ಲಿ ಸೇವಿಸಬೇಕು.

ಶಿಶಿರ, ವಸಂತ, ಗ್ರೀಷ್ಮ, ವರ್ಷ, ಶರದ, ಹೇಮಂತ ಋತುಗಳಲ್ಲಿ ಕ್ರಮವಾಗಿ ಜೀರಿಗೆ, ಜೇನು, ಬೆಲ್ಲ, ಸೈಂಧವಲವಣ, ಕಲ್ಲುಸಕ್ಕರೆಯೊಂದಿಗೆ ಮತ್ತು ಶುಂಠಿಯೊಂದಿಗೆ ಅಣಿಲೆಯನ್ನು ಸೇವಿಸಿದರೆ ಸಕಲ ವ್ಯಾಧಿಗಳು ಬರುವದು ದೂರವಾಗುವದಲ್ಲದೆ, ರಸಾಯನ ಪರಿಣಮಿಸುವದು.

ಊಟದ ಸಮಯದಲ್ಲಿ ಅಣಿಲೆಯನ್ನು ಸೇವಿಸುತ್ತಾ ಬರಲು ಬುದ್ಧಿ-ಬಲವನ್ನು ವೃದ್ಧಿಮಾಡಿ, ಇಂದ್ರಿಯಗಳಲ್ಲಿ ಪ್ರಸನ್ನತೆಯನ್ನುಂಟುಮಾಡುವದು. ಪಿತ್ತ, ಕಫ, ವಾತಾದಿಗಳನ್ನು ಸಮಪಡಿಸಿ, ಮಲಮೂತ್ರಾದಿಗಳನ್ನು ಹೊರದೂಡಿಸುತ್ತದೆ. ಭೋಜನದ ನಂತರ ಸೇವಿಸಿದರೆ ಅನ್ನಪಾನಾದಿ ದೋಷಗಳನ್ನು, ವಾತ, ಕಫಗಳಿಂದ ಉಂಟಾದ ದೋಷಗಳನ್ನು ನಿರ್ಮೂಲಗೊಳಿಸುತ್ತದೆ.

ಅಣಿಲೆಯ ಚಟ್ಟನ್ನು ಹಾಲಿನಲ್ಲಿ ಬೇಯಿಸಿ, ಆ ಬೇಯಿಸಿದ ಹಾಲಿನಲ್ಲಿ ಕಾಳುಮೆಣಸನ್ನು ಅರೆದು ಕಣ್ಣಿನ ಹೊರಗೆ ಲೇಪಹಚ್ಚಿದರೆ ನೇತ್ರವ್ಯಾಧಿಯು ಗುಣಹೊಂದುವದು. ಅಣಿಲೆಯನ್ನೂ ಫಟಿಕಾರವನ್ನೂ ಸೀಯಾಳದ ನೀರಿನಲ್ಲಿ ಅರೆದು ಮಸಿಮಾಡಿ ಎಮ್ಮೆಯ ಬೆಣ್ಣೆಯಲ್ಲಿ ಕಲಸಿ ಸ್ವಚ್ಛವಾದ ಕಂಚಿನ ಪಾತ್ರೆಗಳಲ್ಲಿ ತಿಕ್ಕಿ ಕಣ್ಣಿಗೆ ತಾಗಿಸಿದರೆ ಕಣ್ಣಿನ ಎಲ್ಲಾ ರೋಗವು ಹರವಾಗುವದು. ಅಣಿಲೆಯನ್ನು ಜಜ್ಜಿ ಶುಚಿಯಾದ ವಸ್ತ್ರದಲ್ಲಿ ಕಟ್ಟಿ ನಂತರ ಇದನ್ನು ಪನ್ನೀರಿನಲ್ಲಿ ಅಥವಾ ಸ್ವಚ್ಛವಾದ ತಣ್ಣೀರಿನಲ್ಲಿ ನೆನೆಯಿಟ್ಟು 10-20 ಬಿಂದುಗಳನ್ನು ಕಣ್ಣಿಗೆ ಬಿಡಲು ನೇತ್ರವ್ಯಾಧಿಗಳು ಗುಣವಾಗುವವು. ಅಣಿಲೆಯ ಹಸಿಹೂವನ್ನು ಜೀರಿಗೆಯೊಂದಿಗೆ ಜಜ್ಜಿ ಅದರ ರಸವನ್ನು ಕಣ್ಣಿಗೆ ಹಿಂಡಲು ನೇತ್ರರೋಗವು ಹರವಾಗುವದು.

ಅಣಿಲೆಯ ಅರ್ಕವನ್ನು 1 ಚಾ ಚಮಚೆಯಿಂದ 4 ಚಾ ಚಮಚೆಯ ವರೆಗೆ ದಿನ ಒಂದಕ್ಕೆ 2ರಿಂದ 3 ಸಾರಿ ಸೇವಿಸಿದಲ್ಲಿ ಕಠಿನವಾದ ಹೊಟ್ಟೆಶೂಲೆ,

ಕಾಮಲಾ, ಪಾಂಡು ಇತ್ಯಾದಿ ರೋಗಗಳು ಪರಿಹಾರವಾಗುವುದು. ಇದನ್ನು ಲಘು ವಿರೇಚನಕ್ಕೂ ಪುಷ್ಟಿಗೂ ಕೊಡಬಹುದು.

ಅಣಿಲೆಯ ಚೂರ್ಣವನ್ನು ಹಳೆಬೆಲ್ಲದೊಡನೆ ಸೇವಿಸಿದಲ್ಲಿ ಮೂಲವ್ಯಾಧಿಯು ಶಾಂತವಾಗುವದು. ಅಣಿಲೆಯನ್ನು ಗೋಮೂತ್ರದಲ್ಲಿ ಪಕ್ವ ಮಾಡುತ್ತಾ ಬಂದು ಗೋಮೂತ್ರವೆಲ್ಲಾ ಆರಿಸಿದ ನಂತರ ಅದನ್ನು ಬಿಸಿಲಿನಲ್ಲಿ ಒಣಗಿಸಿಟ್ಟುಕೊಂಡು ದಿನಂಪ್ರತಿ ಜೇನಿನಲ್ಲಿ ಸೇವಿಸಿದಲ್ಲಿ ಕಫದಿಂದ ಉಂಟಾದ ಮೂಲವ್ಯಾಧಿಯು ಗುಣಹೊಂದುವದು. ದನದ ಹಾಲು ಮತ್ತು ಕಲ್ಲುಸಕ್ಕರೆಯೊಡನೆ ಸೇವಿಸಿದಲ್ಲಿ ರಕ್ತಮೂಲವ್ಯಾಧಿಯು ಗುಣವಾಗುವದು.

ಅಣಿಲೆಯನ್ನು ಉಪ್ಪಿನೊಡನೆ ಸೇವಿಸಿದಲ್ಲಿ ಅಥವಾ ಅದನ್ನು ಗೋಮೂತ್ರದಲ್ಲಿ ಮೂರು ದಿನ ನೆನೆಯಿಸಿ ಅನಂತರ ನೀರಿನಲ್ಲಿ ಚನ್ನಾಗಿ ತೊಳೆದು ಒಣಗಿಸಿ ಅದರೊಂದಿಗೆ ಒಣಶುಂಠಿ, ಜೀರಿಗೆ, ಕಾಳು ಮೆಣಸು, ಸೈಂಧವ ಲವಣಗಳನ್ನು ಸಮಪ್ರಮಾಣದಲ್ಲಿ ಚೂರ್ಣಯಿಸಿ ತುಪ್ಪದಲ್ಲಿ ಹುರಿದು ಸೇವಿಸಿದಲ್ಲಿ ಸಕಲ ವಿಧವಾದ ಉದರರೋಗಗಳು ನಾಶವಾಗುವವು. ಇದೇ ಚೂರ್ಣವನ್ನು ಜೇನಿನಲ್ಲಿ ಕಲಸಿ ನಾಲಗೆಗೆ ಸ್ವಲ್ಪ ತಾಗಿಸಿ ಸೇವಿಸುತ್ತಾ ಬರಲು ಕೆಮ್ಮು ಹರವಾಗುವದು. ಅಲ್ಲದೆ ಇದೇ ಚೂರ್ಣವನ್ನು ನಿಂಬೆಹುಳಿರಸದಲ್ಲಿ ಅರೆದು ಕಡಲೆ ಪ್ರಮಾಣದ ಮಾತ್ರೆ ಮಾಡಿ ಬಿಸಿನೀರಿನಲ್ಲಿ ಸೇವಿಸಿದಲ್ಲಿ ಅಜೀರ್ಣವನ್ನು ಹೋಗಲಾಡಿಸಿ, ಹಸಿವನ್ನುಂಟು ಮಾಡುವದಲ್ಲದೆ ಸರಿಯಾದ ಮಲವಿಸರ್ಜನೆಯಾಗಿ, ಹೊಟ್ಟೆಯುಬ್ಬರ, ಹುಳಿ ತೇಗು, ಹೊಟ್ಟೆನೋವು ಇತ್ಯಾದಿ ಗುಣವಾಗುವದು. ಇದೇ ಮಾತ್ರೆಯನ್ನು ಗಜ್ಜುಗೆಯೊಂದಿಗೆ ಸೇವಿಸಿದಲ್ಲಿ ಅಂಡವೃದ್ಧಿಯು ನೋವು, ಚಳಿಜ್ವರ, ಆನೆಕಾಲು (ಶ್ಲೀಪದ)ದಿಂದ ಬರುವ ಜ್ವರಗಳು ಗುಣಹೊಂದುವವು. ಆಡಸೋಗೆ ಎಲೆ ರಸ ಅಥವಾ ತುಳಸಿ ರಸ ಮತ್ತು ಜೇನಿನೊಂದಿಗೆ ಸೇವಿಸಲು, ಶ್ವಾಸಕಾಸ, ಶೀತಜ್ವರ ಇತ್ಯಾದಿ ಗುಣವಾಗುವದು. ಓಮದ್ರಾವಕದಲ್ಲಿ ಅಥವಾ ಕಷಾಯದಲ್ಲಿ ಅರೆದು ಸೇವಿಸಿದರೆ ಅಜೀರ್ಣದಿಂದಾಗುವ ಅತಿಸಾರ, ಕ್ರಿಮಿಗಳಿಂದುಂಟಾಗುವ ಉಪದ್ರವಗಳಾದ ಉದರವಿಕಾರ, ಜ್ವರಾದಿಗಳು ಗುಣವಾಗುವದಲ್ಲದೆ ಜೀರ್ಣವನ್ನು ಸಹ ಉಂಟುಮಾಡಿ ಅಗ್ನಿಯನ್ನು ಪ್ರಜ್ವಲಿಸುವದು.

ಅಣಿಲೆ ಚೂರ್ಣದಲ್ಲಿ ಹಿರಾಕಸ (ಅನ್ನಭೇದಿ)ಯನ್ನು ಅರ್ಧ ದಾಮಾಂಶದಲ್ಲಿ ಸೇರಿಸಿ ಲಿಂಬೆಹುಳಿಯಲ್ಲಿ ಅರೆದು ಕಡಲೆ ಪ್ರಮಾಣ ಮಾತ್ರೆಮಾಡಿ ಬಿಸಿನೀರಿನಲ್ಲಿ ದಿನಕ್ಕೆ ಎರಡು ಸಲ ಸೇವಿಸಿದರೆ ರಕ್ತದುಷ್ಟಿ, ಪಿತ್ತಕಾಮಲೆ, ಪಾಂಡು ಇತ್ಯಾದಿ ರೋಗವು ನಾಶವಾಗಿ ದೇಹಕ್ಕೆ ಕಾಂತಿಯನ್ನುಂಟುಮಾಡುವುದು ಅಲ್ಲದೆ ಉತ್ತಮವಾದ ರಸಾಯನವಾಗಿ ಕೆಲಸ ಮಾಡುವದು. ಇದೇ ಮಾತ್ರೆಯನ್ನು ಲಿಂಬೆಹುಳಿಯ ರಸದಲ್ಲಿ ಅರೆದು ಕಜ್ಜಿ, ತುರುಸುವಿಕೆಯುಳ್ಳ ಕಜ್ಜಿ, ದದ್ದು, ಹುಳು ಮೇಯುವಿಕೆ, ಶ್ವೇತಕುಷ್ಠ ಇತ್ಯಾದಿ ಚರ್ಮದೋಷಗಳಿಗೆ ಲೇಪನಮಾಡಿದರೆ ಗುಣ ಸಿಕ್ಕುವದು.

ಅಣಿಲೆಯನ್ನು ಬೀಜದ್ರಾಕ್ಷೆ, ತ್ರಿಗಡೆ, ಕಟುಕರೋಹಿಣಿ, ಸುನ್ನಾಮುಖಿ, ಗುಲಾಬಿ ಮೊಗ್ಗೆ, ಕೊಂದೆಕೋಡಿನಲ್ಲಿರುವ ಅಂಟು, ಹಸಿ ಅಮೃತಬಳ್ಳಿ ಇವುಗಳಲ್ಲಿ ಯಾವುದಾದರೂ ಒಂದರ ಜೊತೆಗೆ ಸಮಪ್ರಮಾಣದಲ್ಲಿ ಒಟ್ಟಿಗೆ ಅಥವಾ ಎಲ್ಲವನ್ನು 2- 3 ತೊಲೆಯಾಗುವಷ್ಟು ತೆಗೆದು ಕಷಾಯ ಮಾಡಿ ಸೇವಿಸಿದಲ್ಲಿ ಸುಖವಾದ ವಿರೇಚನವು ಆಗುವದಲ್ಲದೆ ದೇಹಕ್ಕೆ ಸುಖ ಉಂಟಾಗುವುದು. ತಿಂಗಳೊಂದಾವರ್ತಿ ಈ ವಿರೇಚನವನ್ನು ಉಪಯೋಗಿಸಿದರೆ ದೇಹದ ಕಶ್ಮಲವೆಲ್ಲಾ ಹೋಗಿ ಆರೋಗ್ಯದಿಂದ ಇರಬಹುದು. ಕಷಾಯಮಾಡಲು ಸಾಧ್ಯವಿಲ್ಲದಿದ್ದಲ್ಲಿ ಮೇಲೆ ಹೇಳಿದ ಔಷಧಿಗಳನ್ನು ಚೆನ್ನಾಗಿ ಗುದ್ದಿ ಚೂರ್ಣಮಾಡಿ ಮುಕ್ಕಾಲು ಕುಡುತೆ ಬಿಸಿನೀರಿನಲ್ಲಿ ಹಾಕಿ ಮುಚ್ಚಿಟ್ಟು, ಬೆಳಿಗ್ಗೆ ಚೆನ್ನಾಗಿ ಹಿಸುಕಿಕೊಂಡು ಗಾಳಿಸಿ, ಜೇನಿನೊಂದಿಗೆ ಸೇವಿಸಲು ಸುಖವಾದ ಭೇದಿಯಾಗುವದು.

ಅಣಿಲೆ ಮತ್ತು ಬೀಜ ದ್ರಾಕ್ಷೆಯನ್ನು ಭೃಂಗರಾಜರಸ(ಗರ್ಗದ ರಸ) ಅರಸಿನ, ಬಾವಂಚಬೀಜ, ಇವುಗಳಲ್ಲಿ ಯಾವುದಾದರೂ ಒಂದರ ಜೊತೆಗೆ ಸೇವಿಸುತ್ತಾ ಬರಲು ಪಿತ್ತದಿಂದಾಗುವ ತಲೆತಿರುಗುವಿಕೆ, ಹೃದಯರೋಗ, ರಕ್ತದೋಷ, ಪಾಂಡು, ಕಾಮಲಾ, ವಮನ, ಕುಷ್ಠ, ಕಾಸ, ಅರುಚಿ, ಪ್ರಮೇಹ, ಗುಲ್ಮ ಪೀಡಕಾದಿ ರೋಗಗಳು ಸಹಜವಾಗಿ ನಾಶವಾಗುವುವು. ಮೇಲೆ ಹೇಳಿದರಲ್ಲಿ ಬೀಜದ್ರಾಕ್ಷೆಯನ್ನು ಬಿಟ್ಟು ಉಳಿದರ ಒಟ್ಟಿಗೆ

[ಹೊದಿಕೆಯ 2ನೇ ಪುಟಕ್ಕೆ ಮುಂದುವರಿದಿದೆ]

Edited, Printed & Published by K. V. Shenoy
at The Prabhat Printers, Ltd., Mangalore.